ಓದುತ್ತಿದ್ದರು. ಇಬ್ಬರೂ ಚೆಲುವೆಯರು. ನಿರ್ಮಲೆ, ಶ್ಯಾಮಲೆ ಸುಂದರವಾಗಿ ನಕ್ಕರೆ ಹೂ ಅರಳಿದಂತೆ, ನೈದಿಲೆ ಬಿರಿದಂತಾಗುವದು. ಸಹಜವಾಗಿ ದುಂಬಿಗಳ ಝೇಂಕಾರವೂ ಆರಂಭವಾಯಿತು. ವಕೀಲರ ತಲೆನೋವೂ ಹೆಚ್ಚಾಯಿತು. ದಾಕ್ಷಾಯಿಣಿ ಸಾಧಾರಣ ವರನನ್ನು ಒಪ್ಪಲು ಸಿದ್ಧಳಿಲ್ಲ. ಅವಳದಾಗದೇ ಉಳಿದವರಿಗೆ ಮಾಡುವಂತಿಲ್ಲ. ಪೀಕಲಾಟಕ್ಕಿಟ್ಟುಕೊಂಡಿತು ವಕೀಲರಿಗೆ. ಕಂಗಾಲಾಗಿ ಸ್ವಾಮಿಗಳ ಮೊರೆ ಹೋದರು. ಆಗ ಅವರ ಕಾಲಿಗೆ ತೊಡರಿದ ಬಳ್ಳಿಯೇ ಶಿವಾನಂದ. ಸ್ವಾಮಿಗಳ ಒಂದೇ ಮಾತಿಗೆ ತಲೆಯಾಡಿಸಿ ಒಪ್ಪಿಗೆ ಕೊಟ್ಟುಬಿಟ್ಟಿದ್ದ. ಸ್ವಾಮಿಗಳ ಮಾತೂಂದ್ರೆ ವೇದವಾಕ್ಯ ಎನ್ನುವ ಭಾವ. ಅವನಿಗೆ ಇನ್ನೂ ಒಳ್ಳೆಯ ಸುಂದರಿ, ಸುಶೀಲೆಯೇ ಸಿಗಬಹುದಾಗಿತ್ತಾದರೂ ಅವ ಅಲ್ಪತೃಪ್ತ. ತನ್ನ ಚಿಕ್ಕ ಸಂಬಳದಲ್ಲಿ ನೆಮ್ಮದಿಯಿಂದ ಜೀವಿಸಿದರೆ ಸಾಕೆನ್ನುವವ. ಇವಳನ್ನು ವಿವಾಹವಾಗಿ ದುರಾಸೆಯ ಹಂಗಿಲ್ಲದೇ ಮುಚ್ಚಟೆಯಾಗಿ ಬದುಕು ನಡೆಸುವ ಕನಸು ಕಂಡವ. ದಾಕ್ಷಾಯಿಣಿಯೂ ಅವನ ಸುಂದರ ರೂಪಿಗೆ ಮಾರುಹೋಗಿದ್ದಳು. ತಂಗಿಯರೂ 'ಆಹಾ!' ಎಂದ ಮೇಲಂತೂ ಕಣ್ಣು ಮುಚ್ಚಿ ಒಪ್ಪಿಗೆ ಕೊಟ್ಟಳು. ವಕೀಲರು ಮದುವೆ ಮಾಡಿ ಧನ್ಯರಾದರು. ಉಸ್ಸೆಂದು ಉಸಿರು ಬಿಟ್ಟರು.

ನವದಂಪತಿಯ ಸಂಸಾರ ಸುಗಮವಾಗಿಯೇ ಆರಂಭವಾಯಿತು. ಶಿವಾನಂದನ ಹತ್ತಿರ ಕೂಡಿಟ್ಟ ದುಡ್ಡೂ ಕೊಂಚ ಇತ್ತು. ಒಳ್ಳೆಯ ಹುಡುಗನೆಂಬ ಹೆಸರು ಎಲ್ಲೆಲ್ಲೂ ಕೆಲಸ ಮಾಡುತ್ತಿತ್ತು. ಕೊರತೆ ಕಾಣಲೇ ಇಲ್ಲ. ಮುಂದೆ ಚಿಟಿಕೆ ಹೊಡೆಯುವಷ್ಟರಲ್ಲಿ ನಿರ್ಮಲೆಯ ಮದುವೆ ಗೊತ್ತಾಯಿತು. ಶ್ರೀಮಂತ ವರನೊಂದಿಗೆ. ತಂದೆ, ತಾಯಿಯೊಂದಿಗೆ ಬೀಗರ ಮನೆಗೆ ಹೋಗಿ ಬಂದ ದಾಕ್ಷಾಯಿಣಿ ಪೆಚ್ಚಾಗಿದ್ದಳು. ಎಲ್ಲಾ ಸೌಕರ್ಯ ತುಂಬಿ ತುಳುಕುವ ವೈಭವೋಪೇತ ಮನೆ. ಒಂದಲ್ಲದಂತೆ ಎರಡು ಕಾರುಗಳು. ತಾಳಲಾಗಲಿಲ್ಲ ಅವಳಿಗೆ. "ನನ್ನನ್ನು ಮಾತ್ರ ಇಂಥ ಮನೆಗೆ ಕೊಟ್ಟುಬಿಟ್ಟರಿ" ಎಂಬ ಮಾತು ಮನದಂಗಳದಿಂದ ಅನಾಯಾಸವಾಗಿ ಉದುರಿಬಿಟ್ಟಿತು. ಮಾತಾಪಿತೃಗಳೂ ನಲುಗಿದರು. 'ಇದಕ್ಕೆ ನಿನ್ನ ರೂಪೇ ಕಾರಣ' ಎಂದು ನುಡಿಯಲಾಗಲಿಲ್ಲ. ತಮ್ಮದೇ ಕರುಳು, ನುಂಗಿದರು. ಮೊದಲ ಮಗಳಿಗೆ ಚಿನ್ನದ ನೆಕ್ಲೇಸು, ಅಳಿಯನಿಗೆ ಹತ್ತು ಸಾವಿರ ರೂ.ಗಳನ್ನು ಕೊಟ್ಟು ದಾಕ್ಷಾಯಿಣಿಯನ್ನು ಶಾಂತವಾಗಿಸಲು ಪ್ರಯತ್ನಿಸಿದರು.

ಶಾಂತವಾಗುವುದೇನು ಬಂತು, ಅಲ್ಲಿ ಈರ್ಷೆ ಮೊಳಕೆಯೊಡೆದಿತ್ತು. ಸ್ಪರ್ಧೆ ಆರಂಭವಾಗಿತ್ತು. ನಾನೇನು ಕಡಿಮೆ ಎನ್ನುವ ಮನೋಭಾವ. ಅವರನ್ನು ಸರಿಗಟ್ಟಲು ತಂದೆ, ತಾಯಂದಿರೂ ಸಹಕರಿಸಬೇಕೆಂಬ ಪರೋಕ್ಷ ಬೇಡಿಕೆ. ಎರಡು ಹೆತ್ತಾಗಲೂ ಅವಳ ಹೆತ್ತವರು ಮಗಳಿಗೆ ಸೀರೆ, ಚಿನ್ನ, ಮಗುವಿಗೆ ಚಿನ್ನದ ಸರ, ಬೆಳ್ಳಿಯ ಕಾಲಂದುಗೆಗಳೊಂದಿಗೆ ವೈಭವವಾಗೇ ಕಳಿಸಿದ್ದಿತ್ತು. ಆದರೆ ಅವರಿಗೂ ಮುಂದಿನ ಜವಾಬ್ದಾರಿಗಳಿತ್ತಲ್ಲ. ಹೀಗಾಗಿ ಶಿವಾನಂದನಿಗೆ ಸಾಲದ ಕಂತುಗಳು ಗಟ್ಟಿಯಾಗಿದ್ದವು. ಮಕ್ಕಳಿಗೆ ಡೊನೇಷನ್ ಮೂಲಕ ಒಳ್ಳೆಯ ಕಾನ್ವೆಂಟ್‌ನಲ್ಲಿ ಸೀಟು ದೊರಕಿತ್ತು. ಫ್ರಿಡ್ಜ್, ಟೀವಿ. ವಾಷಿಂಗ್ ಮಷಿನ್, ಕೂಲರ್, ಫರ್ನಿಚರುಗಳು ಹೀಗೆ ಇನ್ನೂ ಏನೇನೊ ಬಂದು ಮನೆ ತುಂಬಿದ್ದವು. ಕೊಳ್ಳುವಾಗ ದಾಕ್ಷಾಯಿಣಿಗೆ ಎಲ್ಲಿಲ್ಲದ ಉತ್ಸಾಹ. "ನೀವು ಸಾಲ ತೆಗೆಯಿರಿ. ಕಂತು ಜಾಸ್ತಿ ಆದರೂ ಚಿಂತೆಯಿಲ್ಲ. ನಾನು ಮನೆ ಹೇಗೋ ನಿಭಾಯಿಸ್ತೇನೆ" ಎನ್ನುತ್ತಿದ್ದವಳು ನಂತರ ಅದನ್ನು ಮರೆತೇ ಬಿಡುತ್ತಿದ್ದಳು. ಶಿವಾನಂದ ಗೆಳೆಯರ ಬಳಿ ಕೈಸಾಲ ಪಡೆದು ಸರಿತೂಗಿಸುತ್ತಿದ್ದ. ಕೆಲವೊಮ್ಮೆ ತನ್ನ ಬಗ್ಗೆಯೇ ಅಹಸ್ಯಪಟ್ಟುಕೊಳ್ಳುತ್ತಿದ್ದ. ಸದಾ ಸಾಲ, ಸಾಲ... ಸಾಲವಿಲ್ಲದ ದಿನವಿಲ್ಲ. ಕೆಲವೊಮ್ಮೆ